VETERINARY HOSPITAL AT SHIGLI TOWN

219. Sri V. V. WAI (Shirahatti).—

Will the Minister for Agriculture and Animal Husbandry be pleased to state :—

(a) whether it has come to the notice of the Government that there is no veterinary hospital at Shigli town of Shirahatti Taluk which is a Gandhigrama ;

(b) if so, whether Government is considering to sanction a veterinary hospital to that village ?

Sri N. CHIKKE GOWDA (Minister for Agriculture and Animal Husbandry).—

(a) Yes.

(b) Under consideration.

ಶ್ರೀ ವಿ. ವಿ. ವಾಯಿ.—ಶಿರಹಟ್ಟಿ ತಾಲ್ಲೂಕು ಸಿಗ್ಲಿ ಗ್ರಾಮದಲ್ಲಿ 10,000 ಜನಸಂಖ್ಯೆ ಇದೆ. ಸುತ್ತಮುತ್ತ 6-7 ಹಳ್ಳಿಗಳಿವೆ. ಅಲ್ಲಿ ವಕ್ಕಲಿಗರು ಉತ್ತಮವಾದಂಥ ತಳಿಗಳನ್ನು ಜೋಪಾನ ಮಾಡಿ ಉತ್ತಮವಾದಂಥ ವಕ್ಕಲುತನವನ್ನು ಮಾಡುತ್ತಾರೆ. ಆದುದರಿಂದ ಪಶುಸಂಗೋಪನೆಯ ಸಲುವಾಗಿ ದವಾಖಾನೆ ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ಎನ್. ಚಿಕ್ಕೇಗೌಡ. - ಈಗಾಗಲೇ ಉತ್ತರದಲ್ಲಿ ಅದು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೇನೆ. 1974–75 ನೇ ಸಾಲಿನಲ್ಲಿ ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವ ಕಾಲದಲ್ಲಿ ಈ ವಿಚಾರವನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ತೀವ್ರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಫ್. ಎಸ್. ತಾವರೆ.—ಇದರಿಂದ ಸಿಗ್ಲಿ ಗ್ರಾಮದ ಜೊತೆಗೆ ಶಿಗ್ಗಾವಿ, ಸವಣೂರ, ಹಾವೇರಿ ತಾಲ್ಲೂಕುಗಳಿಗೆಲ್ಲಾ ಉಪಯೋಗವಾಗುತ್ತದೆ. ಆದುದರಿಂದ ಇದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಟ್ಟು ತೆರೆಯುವುದಕ್ಕೆ ಆಲೋಚನೆ ಮಾಡುತ್ತೀರಾ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ತಂದಿರತಕ್ಕ ವಿಚಾರವನ್ನು ಪರಿಗಣನೆಗೆ ತೆಗೆದುಕೊಂಡು ವಿಚಾರ ಮಾಡಲಾಗುತ್ತದೆ.

CONSTRUCTION OF HOUSES AT TALUK HEADQUARTERS

304. Sri B. G. BANAKAR (Hirekerur).—

Will the Minister for Transport and Housing be pleased to state :—

(a) whether the Government has any proposal to construct houses at all the Taluk Headquarters through the Karnataka Housing Board ;

(b) the names of the Taluk Headquarters wherein so far no Housing Scheme has been undertaken by the Karnataka Housing Board ;

(c) the total number of houses constructed by Government in each Taluk and the names of such taluks wherein such houses are constructed by the Karnataka Housing Board ?

Sri K. H. RANGANATH (Minister for Transport and Housing).-

(a) There is no definite proposal at present. The construction of houses at each Taluk Headquarters will be determined on the basis of the necessity of construction of houses in a particular Taluk Headquarters.

(b) Statement 'A' placed on the Table of the House.*

(c) Statement 'B' placed on the Table of the House.*

ಶ್ರೀ ಬಿ. ಜಿ. ಬಣಕಾರ್.—ಮಾನ್ಯ ಸಭೆಯ ಮುಂದಿಟ್ಟಿರುವ ತಃಖ್ತೆಯ ಪ್ರಕಾರ ರಾಜ್ಯದಲ್ಲಿ ರುವ 19 ಜಿಲ್ಲೆಗಳ, 175 ತಾಲ್ಲೂಕುಗಳ ಪೈಕಿ 121 ತಾಲ್ಲೂಕುಗಳಲ್ಲಿ 10371 ಮನೆಗಳನ್ನು ಕಟ್ಟಿಸಿದ್ದೀರಿ, ಸಂತೋಷ. ಈ 19 ಜಿಲ್ಲೆಗಳ ಪೈಕಿ ಉಳಿದಿರುವ 54 ತಾಲ್ಲೂಕುಗಳಲ್ಲಿ ಮಾತ್ರ ಮನೆಗಳನ್ನು ಕಟ್ಟಿಸಿಕೊಡಲಕ್ಕೆ ಆಗಿಲ್ಲ. 54 ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ನರಿಗೆ ಅವಶ್ಯಕತೆ ಇದೆ ಎನ್ನುವುದು ಗೊತ್ತಿದೆ, ಆದುದರಿಂದ 54 ತಾಲ್ಲೂಕುಗಳಿಗೂ ಅನ್ವಯಿಸುವಂತೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

† ಶ್ರೀ ಕೆ. ಎಚ್. ರಂಗನಾಥ್.—ಎಲ್ಲೆಲ್ಲಿ ಅವಶ್ಯಕವಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದರೆ ಕಟ್ಟಿಸುವ ಪ್ರಯತ್ನ ಮಾಡಲಾಗುತ್ತದೆ.

ಶ್ರೀ ಬಿ. ಜಿ. ಬಣಕಾರ್.—19 ಜಿಲ್ಲೆಗಳಲ್ಲಿ 121 ತಾಲ್ಲೂಕುಗಳಲ್ಲಿ ಮನೆಗಳನ್ನು ಕಟ್ಟಿಸಿ ದ್ದೀರಿ. ಇನ್ನು 54 ತಾಲ್ಲೂಕುಗಳಲ್ಲಿ ಅವಶ್ಯಕತೆ ಇದೆ ಎನ್ನುವುದು ತಮಗೆ ಗೊತ್ತಿದೆ, ಈ ಸದನದ ಸದಸ್ಯರಿಗೂ ಗೊತ್ತಿದೆ. ಈ 54 ತಾಲ್ಲೂಕುಗಳಲ್ಲಿ ಹಂತಹಂತವಾಗಿ ತೆಗೆದುಕೊಳ್ಳುವುದಕ್ಕೆ ಸಲಹೆ ಇದೆ. ಅದನ್ನು ಆದಷ್ಟು ವಿಚಾರ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುವುದು ಸೂಕ್ತ.

ಶ್ರೀ ಕೆ. ಎಚ್. ರಂಗನಾಥ್.—ವೈಯಕ್ತಿಕವಾಗಿ ನನಗೆ ಗೊತ್ತಿಲ್ಲ. ಸರ್ಕಾರದ ಪತಿಯಿಂದ ಆಂಕಿ ಅಂಶಗಳನ್ನು ತರಿಸಿಕೊಂಡು ಎಲ್ಲೆಲ್ಲಿ ಅವಶ್ಯಕತೆ ಇದೆ, ಅಲ್ಲ ಮಾಡಲಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್. —ನ್ಯಾಯಿ ಮನೆಕಟ್ಟುತಕ್ಕಂಥ ಯೋಜನೆ ಅವಶ್ಯಕತೆಗನುಗುಣವಾಗಿ ಆಯಾಯ ತಾಲ್ಲೂಕುಗಳಲ್ಲಿ ಕಟ್ಟಿಸಿದ್ದೇವೆ ಎಂದು ತಾವು ಉತ್ತರವನ್ನು ಹೇಳಿದ್ದೀರಿ. ಶಿರಸಿ ಮತ್ತು ಸಿದ್ದಾಪುರ ತಾಲ್ಲೂಕುಗಳಲ್ಲಿ 10 ವರ್ಷದಿಂದ ಕಟ್ಟಿದಂಥ ಮನೆಗಳಲ್ಲಿ ಕತ್ತೆ ಕುಡುರೆಗಳು ವಾಸ ಮಾಡುತ್ತಿವೆ. ಇವನ್ನು ರಾಮಕೃಷ್ಣ ಹೆಗೆಡೆಯವರ ಪ್ರಭಾವದಿಂದ ಕಟ್ಟಿಸಿದ್ದೀರೋ, ಅಥವಾ ಅವಶ್ಯಕತೆ ಇದ್ದು ಕಟ್ಟಿಸಿದ್ದೀರೋ ?

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಉತ್ತರ ಗೊತ್ತಿದ್ದರೆ, ಪ್ರಶ್ನೆ ಕೇಳುವ ಅವಶ್ಯಕತೆ ಇರಲಿಲ್ಲ.

ಶ್ರೀ ಎಂ. ಎಚ್ ಜಯಪ್ರಕಾಶ್ ನಾರಾಯಣ್.—ಅವಶ್ಯಕ ಇದ್ದುದರಿಂದ ಸರ್ಕಾರವನ್ನು ಕೇಳುತ್ತಿರುವುದು, ಕತ್ತೆಗಳು ವಾಸ ಮಾಡುತ್ತಿವೆ. ಆ ಬಗ್ಗೆ ಸರ್ಕಾರಕ್ಕೆ ಅನೇಕ ಸಲ ಮನವಿ ಮಾಡಿದೆ. ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಕತ್ತೆಗಳು ವಾಸ ಮಾಡುತ್ತಾ ಇದ್ದರೆ ನಾನೇನು ಉತ್ತರ ಕೊಡಲಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ರೂರಲ್ ಹೌಸಿಂಗ್ ಸ್ಕೀಂ ಪ್ರಕಾರ ಮನೆಗಳನ್ನು ಕಟ್ಟಿಸುತ್ತಿದ್ದೀರಿ. ಕಳೆದ ವರ್ಷ ಅನೇಕ ಗ್ರಾಮಗಳಲ್ಲಿ ಸ್ಕೀಂಗಳನ್ನು ತಯಾರು ಮಾಡಿ ಅಸಿಸ್ಟೆಂಟ್ ಇಂಜಿನಿಯರ್, ಎಕ್ಸಿಕ್ಯೂಟೀವ್ ಇಂಜಿನಿಯರಿಂದ ತರಿಸಿಕೊಂಡಿರಿ. ಆ ಸ್ಕೀಂ ಜಾರಿಯಲ್ಲದೆಯೇ, ನಿಂತು ಹೋಗಿದೆಯೇ?

ಶ್ರೀ ಕೆ. ಎಚ್. ರಂಗನಾಥ್.—ಇನ್ನೂ ಜಾರಿಯಲ್ಲದೆ.

ಶ್ರೀ ಕೆ ಆರ್. ಶ್ರೀನಿವಾಸಲು ನಾಯ್ಡು.—ಬೇಡಿಕೆಗಳು ಬಂದಾಗ, ಅವಶ್ಯಕ ಕಂಡು ಬಂದಾಗ ಕಟ್ಟಿಸುತ್ತೇವೆ ಎಂದು ಹೇಳಿದಿರಿ, ತಮ್ಮ ದೃಷ್ಟಿಯಿಂದ ಯಾವ ಯಾವ ಕಾರ್ಯಗಳು ಅವ ಶ್ಯಕ ಎಂದು ಉತ್ತರ ಕೊಡುತ್ತೀರಾ ?

---

* Copies placed in the Mysore Legislature Library **vide** No. 12, dated 18th March 1974.

ಶ್ರೀ ಕೆ. ಎಚ್. ರಂಗನಾಥ್.—ಅವಶ್ಯಕಗಳು ಬಂದರೆ, ಬೇಡಕೆಗಳು ಬಂದರೆ ನೋಡಿ ಕೊಂಡು, ಹಣದ ಪರಿಸ್ಥಿತಿ ನೋಡಿಕೊಂಡು ಕಟ್ಟಿಸುವುದಕ್ಕೆ ಏರ್ಪಾಡು ಮಾಡಲಾಗುತ್ತದೆ.

ಶ್ರೀ ಬಿ. ಜಿ. ಬಣಕಾರ್.—54 ತಾಲ್ಲೂಕುಗಳಿಂದ, ಆಯಾಯ ತಾಲ್ಲೂಕಿನ ಮಾನ್ಯ ಸದಸ್ಯರು ಹಾಗೂ ಅಭಿವೃದ್ಧಿ ಮಂಡಲಿಯವರು ಬರೆದು ಕಳುಹಿಸಿಕೊಟ್ಟರೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.— ಅದನ್ನು ವಿಚಾರ ಮಾಡಿ, ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಈಗಾಗಲೇ ಹೇಳಿದ್ದೇನೆ.

DISTRICT COURT BUILDINGS IN BANGALORE CITY

342. Sri PRABHAKAR TELKAR (Kalagi).—

Will the Minister for Law and Municipal Administration be pleased to state :—

(a) whether the District Court Buildings in Bangalore City are ready for being handed over to the concerned Department for occupation (the date of completion of the building may be given) ;

(b) if not, the reasons for the delay ?

Sri D. K. NAIKAR (Minister for Law and Municipal Administration).—

(a) The building is not yet ready.

(b) The work could not be completed within the stipulated time as the work of demolition of the existing old structures on the site had been entrusted to different agencies in public auction and alternative accommodation had to be provided before the demolition could be taken up. The progress in the first stage of construction was further delayed as the possession of a portion of the hockey ground of the Government Arts and Science College, Bangalore, which was included in the site for the building was not delivered in time by the concerned authorities.

Sri PRABHAKAR TELKAR.—Is it not a fact that the District Court Buildings in Bangalore were to be handed over to the Department on 26th January 1973 ?

Sri D. K. NAIKAR.—The work was undertaken in 1969 and they were to be completed on 14th March 1973.

Sri PRABHAKAR TELKAR.—Is it not a fact that the construction of the Karnatak Electricity Board building was started much later has been completed and occupied and whereas these court buildings which were started much earlier are not yet completed ? May I know the reasons for the delay in completing these buildings ?